**ಸಾಕ್ಷಿಯನ್ನು ದಿನಾಂಕ 08.09.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಲ್ ಎಸ್ ವಕೀಲರಿಂದಃ**

ನಾನು ಪಿಯುಸಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಮ್ಮ ತಾತನ ಹೆಸರು ಚಿಕ್ಕವೆಂಕಟಸ್ವಾಮಿ. ಅವರ ತಂದೆ ಹೆಸರು ಗೊತ್ತಿಲ್ಲ. ಚಿಕ್ಕವೆಂಕಟಸ್ವಾಮಿಯ ಜೊತೆ ಹುಟ್ಟಿದವರು ಐದು ಜನ ಅಣ್ಣತಮ್ಮಂದಿರು. ಸದರಿ ಐದು ಜನರ ತಂದೆ ಹೆಸರು ವೆಂಕಟಪ್ಪ ಎಂದು ಹೇಳುತ್ತಿದ್ದರು ನನಗೆ ಅಷ್ಟಾಗಿ ಅದರ ಬಗ್ಗೆ ಮಾಹಿತಿ ಇಲ್ಲ. ಅವರನ್ನು ವೆಂಕಟ ಬೋವಿ ಎಂದು ಕರೆಯುತ್ತಿದ್ದರು ಎಂದರೆ ಅಷ್ಟಾಗಿ ಹೇಳುತ್ತಿರಲಿಲ್ಲ. ನಾವು ಬೋವಿ ಜನಾಂಗ. ವೆಂಕಟ ಬೋವಿಯವರಿಗೆ ಮೂಲ ಆಸ್ತಿ ಇದ್ದ ಬಗ್ಗೆ ಗೊತ್ತಿಲ್ಲ. ಅವರಿಗೆ ನಾಮವಲ ವೆಂಕಟಬೋವಿ, ಚಿಕ್ಕವೆಂಕಟಸ್ವಾಮಿ, ಹನುಮನ ಬೋವಿ, ವೆಂಕಟೇಶ ಬೋವಿ, ರಾಮಣ ಬೋವಿ ಎಂಬ ಐದು ಜನ ಮಕ್ಕಳು ಇದ್ದರು ಎಂದರೆ ಸರಿ. ಅವರು ಐದು ಜನ ಮಕ್ಕಳು ತಮ್ಮ ಜೀವಿತ ಕಾಲದಲ್ಲಿ ತಮ್ಮದೇ ಆಸ್ತಿಯನ್ನು ಮಾಡಿಕೊಂಡಿದ್ದರು ಎಂದರೆ ಸರಿ. ರಾಮಣಬೋವಿ ಮತ್ತು ಹನುಮನಬೋವಿ ಎಂಬುವವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ.

ರಾಮಣಬೋವಿ ರವರ ಅಂತ್ಯ ಕಾಲದಲ್ಲಿ ತಮ್ಮ ಎಲ್ಲಾ ಆಸ್ತಿಗಳನ್ನು ವಾದಿ ವೆಂಕಟರವಣಪ್ಪನಿಗೆ ವಿಲ್‌ನಾಮೆ ಮುಖಾಂತರ ಬರೆದಿದ್ದಾರೆ. ಚಿಕ್ಕವೆಂಕಟಸ್ವಾಮಿಗೆ ಅವರದೇ ಆದ ಆಸ್ತಿಗಳು ಇತ್ತು ಎಂದರೆ ಸರಿ. ಸದರಿಯವರಿಗೆ ನನ್ನ ತಂದೆ ಮತ್ತು ವಾದಿ ವೆಂಕಟರವರಣಪ್ಪ ರವರು ಇಬ್ಬರೇ ಗಂಡುಮಕ್ಕಳು ಎಂದರೆ ಸರಿ. ಚಿಕ್ಕವೆಂಕಟಸ್ವಾಮಿ ಅವರಿಗೆ ಐಟಂ 1 ರ ಸ್ವತ್ತು ಸೇರಿತ್ತು ಎಂದರೆ ಸರಿ. ಸರ್ವೆ ನಂ. 56 ರಲ್ಲಿ ಐಟಂ 2 ರಲ್ಲಿ 2 ಎಕರೆ 12 ಗುಂಟೆ ಚಿಕ್ಕವೆಂಕಟಸ್ವಾಮಿಯವರಿಗೆ ಸೇರಿತ್ತು ಎಂದರೆ ಸಾಕ್ಷಿ ಅವರಿಗೆ 1 ಎಕರೆ 6 ಗುಂಟೆ ಅವರಿಗೆ ಬಂದಿದೆ ಎಂದು ನುಡಿಯುತ್ತಾರೆ. ಸದರಿ 2 ಸ್ವತ್ತು ಚಿಕ್ಕವೆಂಕಟಸ್ವಾಮಿಗೆ ಸೇರಿತ್ತು ಎಂದರೆ ಸಾಕ್ಷಿಯು ತಲಾ 1 ಎಕರೆ 6 ಗುಂಟೆಯಂತೆ ಬಂದಿದೆ ಎಂದು ನುಡಿಯುತ್ತಾರೆ. ಐಟಂ ನಂ. 2 ರಲ್ಲಿ 2 ಎಕರೆ 12 ಗುಂಟೆ ಚಿಕ್ಕವೆಂಕಟಸ್ವಾಮಿಯವರಿಗೆ ಸೇರಿದೆ ಎಂದರೆ ಸಾಕ್ಷಿಯು ನನ್ನ ತಾತನಿಗೆ ಬಂದ 1 ಎಕರೆ 6 ಗುಂಟೆಯನ್ನು ನನಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನು

ನನಗೆ ಬಂದಿದೆ ತೋರಿಸಲು ದಾಖಲಾತಿಗಳನ್ನು ಕೊಟ್ಟಿದ್ದೇನೆ. ಸದರಿ ಐಟಂ ನಂ. 2 ರ ಸ್ವತ್ತು ಯಾವ ರೀತಿ ಬಂದಿದೆ ಎಂದರೆ ಸಾಕ್ಷಿಯು ನನ್ನ ತಂದೆಯು ನನ್ನ ತಾತನ ಇಚ್ಚೆಯ ವಿರುದ್ಧವಾಗಿ ಮದುವೆಯಾದ ಕಾರಣ 1965 ರಲ್ಲಿ ಸರ್ವೆ ನಂ. 56 ರಲ್ಲಿ 1 ಎಕರೆ 6 ಗುಂಟೆ, ಸರ್ವೆ ನಂ. 58 ರಲ್ಲಿ 24 ಗುಂಟೆ, ಸರ್ವೆ ನಂ. 114 ರಲ್ಲಿ 30 ಗುಂಟೆ ಗದ್ದೆಯನ್ನು ಕೊಟ್ಟು ಅವರನ್ನು ಕುಟುಂಬದಿಂದ ಹೊರಗೆ ಹಾಕಿದ್ದರು. ತದನಂತರ 1974 ರಲ್ಲಿ ನನ್ನ ತಂದೆಯು ಹನುಮನ ಬೋವಿ ಯವರಿಂದ ಸರ್ವೆ ನಂ. 56 ರಲ್ಲಿ 1 ಎಕರೆ 6 ಗುಂಟೆಯನ್ನು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 58 ರಲ್ಲಿ 24 ಗುಂಟೆ, ಸರ್ವೆ ನಂ.114 ರಲ್ಲಿ 30 ಗುಂಟೆ ಆಸ್ತಿಗಳು ಮೂಲತಃ ಚಿಕ್ಕವೆಂಕಟಸ್ವಾಮಿಯವರಿಗೆ ಸೇರಿದೆ. ಸರ್ವೆ ನಂ. 58 ರಲ್ಲಿ 24 ಗುಂಟೆ, ಸರ್ವೆ ನಂ. 114 ರಲ್ಲಿ 30 ಗುಂಟೆ ಆಸ್ತಿಗಳು ಮೂಲತಃ ನನ್ನ ದೊಡ್ಡತಾತ ನಾಮನುವೆಂಕಟ ಬೋವಿಗೆ ಸೇರಿದೆ ಎಂದರೆ ಸರಿಯಲ್ಲ.

ಸರ್ವೆ ನಂ. 58 ರಲ್ಲಿ 24 ಗುಂಟೆ, ಸರ್ವೆ ನಂ. 114 ರಲ್ಲಿ 30 ಗುಂಟೆ ಆಸ್ತಿಗಳು ಮೂಲತಃ ನಾಮಾನುವೆಂಕಟ ಬೋವಿ ವಾದಿಗೆ ವಿಲ್‌ನಾಮೆ ಮುಖಾಂತರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ ಮೋಸದಿಂದ ಮಾಡಿಕೊಂಡಿದ್ದಾರೆ. ಸದರಿ 2 ಆಸ್ತಿಗಳು ಮೂಲತಃ 5 ತಾತಂದಿರ ಹೆಸರನಲ್ಲಿತ್ತು. ಮತ್ತೆ ಸಾಕ್ಷಿಯು ನುಡಿಯುತ್ತಾರೆ ಅವು ಯಾರ ಹೆಸರಿನಲ್ಲಿತ್ತು ಎಂದು ತಿಳಿದುಕೊಳ್ಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾಮಾನುವೆಂಕಟ ಬೋವಿಯ ಹೆಸರಿನಲ್ಲಿ ಎಷ್ಟು ಆಸ್ತಿ ಇತ್ತು ಎಂದು ತಿಳಿದುಕೊಂಡಿಲ್ಲ. ನಾಮಾನುವೆಂಕಟ ಬೋವಿಯವರು ಸ್ವಯಾರ್ಜಿತವಾಗಿ ಸಂಪಾದಿಸಿದ ಆಸ್ತಿಗಳನ್ನು ವಾದಿಗೆ ವಿಲ್‌ನಾಮೆ ಮುಖಾಂತರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ ಮೋಸದಿಂದ ಮಾಡಿಕೊಂಡಿದ್ದಾರೆ. ಸದರಿ ವಿಲ್‌ನಾಮೆಯನ್ನು ಮೋಸ ಮಾಡಿಕೊಂಡಿದ್ದಾರೆ ಎಂದು ಪ್ರಶ್ನೆ ಮಾಡಿದ್ದೀರಾ ಎಂದರೆ ನನ್ನ ತಂದೆ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದು ನಾವು ಇದೇ ಮೊದಲು ಕೋರ್ಟಿಗೆ ಬಂದಿದ್ದು ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ಪಹಣಿ ಎಲ್ಲಾ ಬಂದಿದೆ ಎಂದರೆ ಸಾಕ್ಷಿಯು ನನ್ನ ತಂದೆಯು ಅವರ ಹೇಳಿದಂತೆ ಕೇಳಿಲ್ಲ ಎಂದು ಎಲ್ಲಾ ಅವರ ಹೆಸರಿಗೆ ಬಂದಿದೆ ಎಂದು ನುಡಿಯುತ್ತಾರೆ. 45 ವರ್ಷದ ಹಿಂದೆ

ಆ ರೀತಿ ಖಾತೆ ಕಂದಾಯ ಬಂದಿದೆ ಎಂದರೆ ಸರಿ. ನನ್ನ ತಂದೆ ಎಸ್ ಎಸ್ ಎಲ್ ಸಿ ಯವರೆಗೆ ವ್ಯಾಸಂಗ ಮಾಡಿದ್ದಾರೆ. ವಾದಿ ವೆಂಕಟಬೋವಿ ಅವಿದ್ಯಾವಂತ ಎಂದರೆ ಸರಿ. ನನ್ನ ತಂದೆ ಹೆಚ್ಚು ಬುದ್ದಿವಂತರು ಎಂದರೆ ಸಾಕ್ಷಿಯು ಅವರಿಗೆ ಜಮೀನಿನ ವ್ಯವಹಾರದ ಬಗ್ಗೆ ಅಷ್ಟೊಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಬುದ್ದಿವಂತ ಆದ ಕಾರಣ ಎಲ್ಲಾ ದಾಖಲಾತಿಗಳನ್ನು ಸೃಷ್ಠಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 58 ರಲ್ಲಿ 2 ಎಕರೆ 36 ಗುಂಟೆ ಚಿಕ್ಕವೆಂಕಟಸ್ವಾಮಿ ಯವರ ಹೆಸರಿನಲ್ಲಿದ್ದು ಎಂದು ನಾನು ಹೇಳಿದ್ದು ಈಗ ಖಾತೆ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ತಲಾ 1 ಎಕರೆ 18 ಗುಂಟೆಯನ್ನು ನನ್ನ ತಂದೆ ಮತ್ತು ಚಿಕ್ಕಪ್ಪ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 58 ರಲ್ಲಿ 2 ಎಕರೆ 36 ಗುಂಟೆಯಲ್ಲಿ ನನ್ನ ತಂದೆಗೆ ಮತ್ತು ವಾದಿಗೆ ಸಮಾನ ಹಕ್ಕಿದೆ ಎಂದರೆ ಸರಿ, ಅದರಲ್ಲಿ ನಮಗೆ 24 ಗುಂಟೆ ಕೊಟ್ಟಿದ್ದಾರೆ ಬಾಕಿ 34 ಗುಂಟೆ ಬರಬೇಕಾಗಿದೆ ಎಂದು ನುಡಿಯುತ್ತಾರೆ. ಈಗ ಪ್ರಸ್ತುತ ಪಹಣಿ 2 ಎಕರೆ 36 ಗುಂಟೆಗೆ ನನ್ನ ತಂದೆಯ ಹೆಸರಿನಲ್ಲಿ ಬರುತ್ತಿದೆ. ಪಾವತಿ ವಾರಸು ಮುಖಾಂತರ ನನ್ನ ತಂದೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಅದರ ಮೇಲೆ 3,80,000/ ಲೋನ್ ತೆಗೆದುಕೊಂಡಿದ್ದಾರೆ. ಇದೆಲ್ಲಾ ದಾಖಲಾತಿಗಳನ್ನು ವಾದಿಗೆ ಗೊತ್ತಿಲ್ಲದಂತೆ ನಮ್ಮ ತಂದೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ನನಗೆ ಇಬ್ಬರು ಮಕ್ಕಳು. ವಾದಿಯ ತಂದೆಗೆ ಸೇರಿದ ಎಲ್ಲಾ ಆಸ್ತಿಗಳ ದಾಖಲಾತಿಗಳನ್ನು ನನ್ನ ತಂದೆಯ ಹೆಸರಿಗೆ ಸುಳ್ಳು ದಾಖಲಾತಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈಗಲೂ ವಾದಿ ಮತ್ತು ನಮಗೂ ಜಂಟಿ ಸ್ವಾಧೀನದಲ್ಲಿ ಆಸ್ತಿಗಳು ಇದ್ದಾವೆ ಎಂದರೆ ಸರಿಯಲ್ಲ. ನನ್ನ ತಂದೆ ಮೋಸ ಮಾಡಿ, ಆದಾಯ ಮಾಡಿ ಲಪಟಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಆದಕಾರಣ ವಾದಿಗಳು ಭಾಗ ಕೇಳಿದ್ದರೂ ಎಂದರೆ ಸರಿಯಲ್ಲ. ಅವರೇ ನಮಗೆ 18 ಎಕರೆ ಮೋಸ ಮಾಡಿ ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾವು ಭಾಗ ಕೊಡದೇ ಇದ್ದ ಕಾರಣ ನ್ಯಾಯಾಲಯದಲ್ಲಿ ಪ್ರಕರಣವನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ಹೆಣ್ಣುಮಕ್ಕಳು ಬದುಕಿಲ್ಲ ಆದರೆ ಅವರ ಮಕ್ಕಳು ಇದ್ದಾರೆ. ನನ್ನ ತಂದೆ ಮತ್ತು ವಾದಿ ಇಬ್ಬರೇ ಗಂಡು ಮಕ್ಕಳು ಎಂದರೆ ಸರಿ. 5 ಐಟಂಗೆ ದಾವೆ ತಂದಿದ್ದಾರೆ. ಸದರಿ 5 ಐಟಂ ಬಿಟ್ಟರೆ ಚಿಕ್ಕವೆಂಕಟಸ್ವಾಮಿಗೆ ಬೇರೆ ಆಸ್ತಿ

ಇಲ್ಲ. ನಾವೇ ದಾವೆ ಆಸ್ತಿಯನ್ನು ಲಪಾಟಾಯಿಸಬೇಕೆಂದು ಸುಳ್ಳು ದಾಖಲಾತಿ ಸಲ್ಲಿಸಿ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.